ಆ) 1) ವಿರಾಜಪೇಟೆ ಗಣಿತ 2

ವಿಜ್ಞಾನ	2
ಒಟ್ಟು	**4**

2) ಸೋಮವಾರಪೇಟೆ

ಗಣಿತ	4
ವಿಜ್ಞಾನ	3
ಕಲಾ	3
ಕನ್ನಡ	1
ದೈಹಿಕ ಶಿಕ್ಷಣ	1
ವೃತ್ತಿ ಶಿಕ್ಷಣ	2
ಒಟ್ಟು	**14**

3) ಮಡಿಕೇರಿ

ಗಣಿತ	1
ವಿಜ್ಞಾನ	1
ವೃತ್ತಿ ಶಿಕ್ಷಣ	2
ಒಟ್ಟು	**4**

ಇ) ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇಂಜಿನಿಯರಿಂಗ್ ಶಿಕ್ಷಣಗಳಲ್ಲಿ ಸೆಮಿಸ್ಟರ್ ಪದ್ಧತಿ

2430 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಜಿನಿಯರಿಂಗ್ ಶಿಕ್ಷಣದಲ್ಲಿ ಸೆಮಿಸ್ಟರ್ ಪದ್ಧತಿಯನ್ನು ಜಾರಿಗೆ ತರುವಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು ಶಿಫಾರಸ್ಸು ಮಾಡಿರುವ ಸಂಗತಿ ನಿಜವೇ?

ಆ) ಈಗಾಗಲೇ ರಾಜ್ಯದಲ್ಲಿ ಇಂಜಿನಿಯರಿಂಗ್ ಶಿಕ್ಷಣದಲ್ಲಿ ಸೆಮಿಸ್ಟರ್ ಪದ್ಧತಿ ಯಾವ ಯಾವ ವಿಶ್ವವಿದ್ಯಾಲಯದಲ್ಲಿ ಜಾರಿಯಲ್ಲಿದೆ?

ಇ) ಉಳಿದ ವಿಶ್ವವಿದ್ಯಾಲಯಗಳಲ್ಲಿಯೂ ಸಹ ಸೆಮಿಸ್ಟರ್ ಪದ್ಧತಿ ಗಳನ್ನು ಸರ್ಕಾರದವರು ಜಾರಿಗೆ ತರಲು ನಿರ್ಧರಿಸಿರುವರೆ?

ಈ) ಸೆಮಿಸ್ಟರ್ ಪದ್ಧತಿ ಬಗ್ಗೆ ಸರ್ಕಾರದ ನಿರ್ದಿಷ್ಟ ಧೋರಣೆ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು)

ಅ) ಹೌದು.

ಆ) ಈ ಕೆಳಗೆ ಸೂಚಿಸಿರುವ ವಿಶ್ವವಿದ್ಯಾನಿಲಯಗಳಿಂದ ಸಂಯೋಜಿಸಿರುವ ತಾಂತ್ರಿಕ ಕಾಲೇಜುಗಳಲ್ಲಿ

1) ಮಂಗಳೂರು

2) ಗುಲ್ಬರ್ಗಾ

3) ಮೈಸೂರು

4) ಕರ್ನಾಟಕ

5) ಕುವೆಂಪು

ಇ) ತಾ. 3-10-90 ರಂದು ನಡೆದ ಅಂತರ ವಿಶ್ವವಿದ್ಯಾಲಯದ ಮಂಡಳಿಯ ಸಭೆಯಲ್ಲಿ ಈ ಬಗ್ಗೆ ಒಂದು ಸಲಹೆ ಪ್ರೇರೇಪಿಸಿದೆ.

ಈ) ಏಕ ರೂಪದ ಪದ್ಧತಿ ಜಾರಿಗೊಳಿಸಲು

ಭಾಗ್ಯ ಜ್ಯೋತಿ ಯೋಜನೆ ಪಡೆದ ಕುಂಟುಂಬಗಳ ಸಂಖ್ಯೆ

2206 - ಶ್ರೀ ಎಸ್. ರುದ್ರಪ್ಪ (ತರುವೇಕೆರೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಇಂಧನ ಇಲಾಖೆ (ಕೆ.ಇ.ಬಿ)ಯಲ್ಲಿ ಭಾಗ್ಯಜ್ಯೋತಿ ಯೋಜನೆಯನ್ನು ಜಾರಿಗೊಳಿಸಲಾಗಿದೆಯೆ. ಹಾಗಿದ್ದಲ್ಲಿ 1989-90, 90-91ನೇ ಸಾಲಿನಲ್ಲಿ ಈ ಯೋಜನೆಯ ಸೌಲಭ್ಯ ಎಷ್ಟು ಕುಟುಂಬಗಳಿಗೆ ದೊರೆತಿದೆ. (ವಿವರಗಳನ್ನೊದಗಿಸುವುದು).*

ಆ) *ಭಾಗ್ಯಜ್ಯೋತಿ ಸೌಲಭ್ಯ ಪಡೆದಿರುವ ಒಟ್ಟು ಕುಟುಂಬಗಳ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಅಲೆಮಾರಿ ಜನಾಂಗದವರ ಸಂಖ್ಯೆ ಎಷ್ಟು? ಆ ಗ್ರಾಮಗಳು, ತಾಲ್ಲೂಕು ಮತ್ತು ಜಿಲ್ಲೆಗಳ ವಿವರಗಳನ್ನೊದಗಿಸುದು.*

ಇ) *ಶೇಕಡಾ 10ರ ಮೀಸಲಾತಿಯನ್ವಯ ಅಲೆಮಾರಿ ಜನಾಂಗದ ಕುಟುಂಬದವರಿಗೆ ಈ ಯೋಜನೆ ಸೌಲಭ್ಯ ನೀಡಲು ಸರ್ಕಾರ ಉದ್ದೇಶಿಸಲಾಗಿದೆಯೆ. ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?*

ಈ) *ರಾಜ್ಯದಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ 90-91ನೇ ಸಾಲಿನಲ್ಲಿ ವಿದ್ಯುತ್ ಸಂರಪರ್ಕ ನೀಡಿರುವ ಸಂಖ್ಯೆ ಎಷ್ಟು. ಅವುಗಳಲ್ಲಿ ತಾಲ್ಲೂಕು ಜಿಲ್ಲಾವಾರು ಅಂಕಿ ಅಂಶಗಳೊಂದಿಗೆ ಮಾಹಿತಿ ನೀಡುವುದು.*

ಉ) *ಈ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮತ್ತು ಅಲೆಮಾರಿ ಜನಾಂಗದ ಫಲಾನುಭವಿಗಳಿಗೆ ಸೌಲಭ್ಯ ನೀಡಿರುವ ಕುಟುಂಬಗಳೆಷ್ಟು (ಗ್ರಾಮ ತಾಲ್ಲೂಕು, ಜಿಲ್ಲಾವಾರು ವಿವರ ಒದಗಿಸುವುದು)*

ಊ) *ಅಲೆಮಾರಿ ಜನಾಂಗದ ಅರ್ಧ ಫಲಾನುಭವಿಗಳಿಗೂ ವಿಶೇಷ ಆದ್ಯತೆಯ ಮೇರೆಗೆ ಯಾವುದೇ ನಿರ್ಬಂಧವಿಲ್ಲದೆ ವಿದ್ಯುತ್ ಸಂಪರ್ಕವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡುವಂತೆ ಇವರಿಗೂ ನೀಡಲು ಸರ್ಕಾರ ಉದ್ದೇಶಿಸಿದೆಯೆ. ಇಲ್ಲದಿದ್ದಲ್ಲಿ ಕಾರಣವೇನು. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮಗಳಾವುವು.*

ಋ) *ರಾಜ್ಯದಲ್ಲಿರುವ ಅಲೆಮಾರಿ ಜನಾಂಗದ ಗ್ರಾಮ ಮತ್ತು ಕಾಲೋನಿಗಳ ಸಂಖ್ಯೆ ಎಷ್ಟು ಅವುಗಳು ಯಾವುವು. ಈ ಪೈಕಿ ಎಷ್ಟು ಗ್ರಾಮ ಮತ್ತು ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ. ಉಳಿದ ಗ್ರಾಮಗಳಿಗೆ ಎಷ್ಟು ಸಮಯದಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುವುದು.*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ಹೌದು. 1989-90 ಮತ್ತು 1990-91 ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಅನುಕ್ರಮವಾಗಿ 20,454 ಮತ್ತು 18,852 ಫಲಾನುಭವಿಗಳ ಮನೆಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.